ಆರ್ ಬಿ ಐ / ೨೦೦೫-೦೬/೧೦೭
ಡಿಸಿಎಂ ( ಯೋಜನೆ ) ಸಂಖ್ಯೆ .ಜಿ ೭ / ೧೦.೦೧.೦೦ / ೨೦೦೫-೦೬
**ಆಗಸ್ಟ್ ೧೦, ೨೦೦೫**

ಗೆ,
ಅಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು / ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು/
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಸಾರ್ವಜನಿಕ ವಲಯ ಬ್ಯಾಂಕುಗಳು, ಖಾಸಗಿ ವಲಯ ಬ್ಯಾಂಕುಗಳು , ವಿದೇಶಿ ಬ್ಯಾಂಕುಗಳು

ಮಾನ್ಯರೆ

**ಹೆಚ್ಚಿನ / ಹೊಸ ಭದ್ರತಾ ವೈಶಿಷ್ಟ್ಯಗಳನ್ನು ಹೊಂದಿರುವ ಭಾರತೀಯ ಬ್ಯಾಂಕ್ ನೋಟುಗಳು**

ದಿನಾಂಕ ಮೇ ೦೭, ೨೦೦೫ ರ ನಮ್ಮ ಪತ್ರ ಆರ್‌ಬಿಐ / ೨೦೦೪-೦೫ / ೪೫೮ / ಡಿಸಿಎಂ (ಯೋಜನೆ) ಸಂಖ್ಯೆ . ಜಿ .೪೦ / ೧೦.೦೧.೦೦ / ೨೦೦೪-೦೫ ನ್ನು ದಯವಿಟ್ಟು ನೋಡಿ. ಈ ಪತ್ರದೊಂದಿಗೆ ಭಾರತೀಯ ಬ್ಯಾಂಕ್ ನೋಟುಗಳಲ್ಲಿ ಸೇರಿಸಬೇಕಾದ ಹೆಚ್ಚಿನ / ಹೊಸ ಭದ್ರತಾ ವೈಶಿಷ್ಟ್ಯಗಳ ಪಟ್ಟಿಯನ್ನು ಮತ್ತು ಮೇ ೨೫, ೨೦೦೫ ರಂದು ಮುಂಬೈನಲ್ಲಿ ನಡೆದ ಬ್ಯಾಂಕುಗಳ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ನಡೆಸಿದ ಚರ್ಚೆಗಳ ವಿವರಗಳನ್ನು ಕಳುಹಿಸಿಕೊಡಲಾಗಿದೆ.

೨. ಹೆಚ್ಚಿನ / ಹೊಸ ಭದ್ರತಾ ವೈಶಿಷ್ಟ್ಯಗಳನ್ನು ಹೊಂದಿರುವ ೫೦ ರೂಪಾಯಿ ಮತ್ತು ೧೦೦ ರೂಪಾಯಿ ವರ್ಗದ ಬ್ಯಾಂಕು ನೋಟುಗಳನ್ನು ೨೦೦೫ ರ ಆಗಸ್ಟ್ ನಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ತರುವಾಯ ೨೦೦೫ ರ ಸೆಪ್ಟಂಬರ್ ನಲ್ಲಿ ೫೦೦ ರೂಪಾಯಿ ಮತ್ತು ೧೦೦೦ ರೂಪಾಯಿಗಳ ವರ್ಗದ ಬ್ಯಾಂಕ್ ನೋಟುಗಳನ್ನು ಬಿಡುಗಡೆ ಮಾಡಲಾಗುವುದು. ಹೆಚ್ಚಿನ / ಹೊಸ ಭದ್ರತಾ ವೈಶಿಷ್ಟ್ಯಗಳನ್ನು ಹೊಂದಿರುವ ೧೦ ರೂಪಾಯಿ ಮತ್ತು ೨೦ ರೂಪಾಯಿ ವರ್ಗದ ಬ್ಯಾಂಕ್ ನೋಟುಗಳನ್ನು ೨೦೦೬ ರಲ್ಲಿ ಬಿಡುಗಡೆ ಮಾಡುವ ಗುರಿಯಿಟ್ಟುಕೊಳ್ಳಲಾಗಿದೆ.

೩. ನಿಮ್ಮ ಮಾಹಿತಿಗಾಗಿ ಮತ್ತು ನೀವು ಅಗತ್ಯ ಕ್ರಮ ತೆಗೆದುಕೊಳ್ಳುವುದಕ್ಕಾಗಿ ಹೆಚ್ಚಿನ / ಹೊಸ ಭದ್ರತಾ ವೈಶಿಷ್ಟ್ಯಗಳನ್ನು ಹೊಂದಿರುವ ೫೦ ರೂಪಾಯಿ ಮತ್ತು ೧೦೦ ರೂಪಾಯಿ ವರ್ಗದ ನೋಟುಗಳ ಬಗ್ಗೆ ನೀಡಿರುವ ಪತ್ರಿಕಾ ಪ್ರಕಟಣೆಯ ಒಂದು ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಅದನ್ನು ನಮ್ಮ ವೆಬ್‌ಸೈಟ್‌ನಲ್ಲಿ (www.rbi.org.in) ಅಳವಡಿಸಲಾಗಿದೆ. ನಿಮ್ಮ ಸಿಬ್ಬಂದಿವರ್ಗದವರ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಹೆಚ್ಚಿನ / ಹೊಸ ವೈಶಿಷ್ಟ್ಯಗಳನ್ನು ಹೊಂದಿರುವ ಬ್ಯಾಂಕು ನೋಟುಗಳ ಬಗ್ಗೆ ಸಾಕಷ್ಟು ಪ್ರಚಾರ ನೀಡುವಂತೆ ನಿಮಗೆ ಸೂಚಿಸಲಾಗಿದೆ. ನೀವು ಅವುಗಳನ್ನು ನಿಮ್ಮ ಶಾಖೆಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಮಾಡಬಹುದು.

೪. ದಯವಿಟ್ಟು ಸ್ವೀಕೃತಿ ನೀಡಿ.

**ತಮ್ಮ ವಿಶ್ವಾಸಿ,**
**(ಯು . ಎಸ್. ಪಾಲಿವಾಲ್ )**
**ಮುಖ್ಯ ಪ್ರಧಾನ ವ್ಯವಸ್ಥಾಪಕರು**